# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.154/2010/DRE ~~ಸಹಿಕಾಸ~~-2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಬೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 10.9.2018.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ವರದಿ

**ವಿಷಯ:** (1) ಶ್ರೀ. *ರಾಜಶೇಖರ, ಯೋಜನಾಧಿಕಾರಿಗಳು, ನಿರ್ಮಿತಿ ಕೇಂದ್ರ, ಕೈಗಾರಿಕಾ ಪ್ರದೇಶ, ಕ್ಯಾತಸಂದ್ರ, ತುಮಕೂರು ತಾಲ್ಲೂಕು,* ಇವರ ವಿರುದ್ದ ಕ್ರಮಕೈಗೊಳ್ಳುವ ಬಗ್ಗೆ.

*******

ಶ್ರೀ. ಸಿ.ನಾರಾಯಣ, ತಂದೆ ಚೌಡಪ್ಪ, ಬೊಮ್ಮಲದೇವಿಪುರದ ನಿವಾಸಿ, ಕೊರಟಗೆರೆ ತಾಲ್ಲೂಕು, ತುಮಕೂರು ಜಿಲ್ಲೆ, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ. *ರಾಜಶೇಖರ, ಯೋಜನಾಧಿಕಾರಿಗಳು, ನಿರ್ಮಿತಿ ಕೇಂದ್ರ, ಕೈಗಾರಿಕಾ ಪ್ರದೇಶ, ಕ್ಯಾತಸಂದ್ರ, ತುಮಕೂರು ತಾಲ್ಲೂಕು,* (ಇನ್ನು ಮುಂದೆ " ಎದುರುದಾರರು " ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ ಕೊರಟಗೆರೆ ತಾಲ್ಲೂಕು ಬೊಮ್ಮಲದೇವಿಪುರ ಗ್ರಾಮದಲ್ಲಿ ಸರ್ಕಾರಿ ಪ್ರೌಢಶಾಲೆ ಕೊಠಡಿ ನಿರ್ಮಾಣಕ್ಕೆಂದು ನಬಾರ್ಡ್‌ನಿಂದ ರೂ.20 ಲಕ್ಷಗಳ ಹಣ ಮಂಜೂರಾಗಿದ್ದು, ತುಮಕೂರು ಜಿಲ್ಲಾ ಪಂಚಾಯತಿಯವರು ಮೇಲ್ಕಂಡ ಪ್ರೌಢಶಾಲೆಗೆ ಬೇಕಾದ 5 ಶಾಲಾ ಕೊಠಡಿಗಳನ್ನು ನಿರ್ಮಿಸಲು ಅನುಮೋದಿತ ನೀಲಿನಕ್ಷೆ ಮತ್ತು ಅಂದಾಜು ಪಟ್ಟಿಯನ್ನು ತಯಾರಿಸಿ ಕಟ್ಟಡ ನಿರ್ಮಾಣ ಸಂಸ್ಥೆಯಾದ ತುಮಕೂರು ನಿರ್ಮಿತಿ ಕೇಂದ್ರಕ್ಕೆ ವಹಿಸಿತ್ತು. 2007-08ರಲ್ಲಿ ಮೊದಲ ಕಂತು ರೂ. 7.90 ಲಕ್ಷ

ಮತ್ತು 2008–09ರಲ್ಲಿ 2ನೇ ಹಾಗೂ ಕೊನೆಯ ಕಂತು ರೂ. 12.10 ಲಕ್ಷ ಬಿಡುಗಡೆ ಮಾಡಿತ್ತು. ನಿರ್ಮಿತಿ ಕೇಂದ್ರದವರು ಫೌಂಡೇಷನ್ ಕೆಲಸವನ್ನು ಮಾಡಿ 3–4 ವರ್ಷಗಳವರೆಗೆ ಕೆಲಸವನ್ನು ಸ್ಥಗಿತಗೊಳಿಸಿದ್ದರು. ಫೌಂಡೇಷನ್ ಕೂಡ ಕಳಪೆ ದರ್ಜೆಯ ಕಾಮಗಾರಿಯಾಗಿತ್ತು. ಈ ಬಗ್ಗೆ ನಿರ್ಮಿತಿ ಕೇಂದ್ರದವರಾಗಲೀ, ಜಿಲ್ಲಾ ಪಂಚಾಯತಿಯವರಾಗಲೀ ಯಾವುದೇ ಕ್ರಮಕೈಗೊಂಡಿರುವುದಿಲ್ಲ. ಕಟ್ಟಡ ನಿರ್ಮಾಣ ಕಾರ್ಯದಲ್ಲಿ ಸಾಕಷ್ಟು ಅವ್ಯವಹಾರ ಮತ್ತು ಹಣ ದುರುಪಯೋಗ ಆಗಿರುತ್ತದೆಂದು ದೂರುದಾರರು ಆಪಾದಿಸಿರುತ್ತಾರೆ.

3. ದೂರಿನ ಜೊತೆಗೆ ಬೊಮ್ಮಲದೇವಿಪುರ ಗ್ರಾಮದ ಸ.ನಂ.93ರಲ್ಲಿ 2.7 ಎಕರೆ ಜಮೀನನ್ನು ಸರ್ಕಾರಿ ಪ್ರೌಢಶಾಲೆಗೆ ಮಂಜೂರು ಮಾಡಿದೆಯೆಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ತಮ್ಮ ಪತ್ರ ಸಂ.ಕಂ.ಇ.151.ಎಲ್.ಜಿ.ಟಿ.07 ದಿ.19.11.2007ರಂದು ಜಿಲ್ಲಾಧಿಕಾರಿಗಳಿಗೆ ಬರೆದ ಸದರಿ ಪತ್ರದ ನಕಲು, ದಿ.31.10.2007ರಂದು ಉಪನಿರ್ದೇಶಕರು, ಮಧುಗಿರಿಯವರು, ಕೊರಟಗೆರೆ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ, ಸರ್ಕಾರಿ ಪ್ರೌಢಶಾಲೆ ಮುಖ್ಯ ಶಿಕ್ಷಕರಿಗೆ, ನಬಾರ್ಡ್‌ನಿಂದ ಆರ್.ಐ.ಡಿ.ಎಫ್.12ರಲ್ಲಿ ಪ್ರೌಢಶಾಲಾ ಕೊಠಡಿ ನಿರ್ಮಾಣಕ್ಕೆ ಹಣ ಬಿಡುಗಡೆಯಾದ ಪತ್ರದ ನಕಲನ್ನು, ಪ್ರೌಢಶಾಲೆ ನೀಲಿನಕ್ಷೆಯ ಪ್ರತಿ, 20 ಲಕ್ಷ ರೂ.ಗಳಿಗೆ ತಯಾರಿಸಿದ ಅಂದಾಜುಪಟ್ಟಿಯ ಪ್ರತಿ ಹಾಗೂ 2 ಫೋಟೋಗಳನ್ನು ಹಾಜರುಪಡಿಸಿರುತ್ತಾರೆ.

4. ದೂರು ದಾಖಲಾದ ನಂತರ ದಿ.11.8.2010ರಂದು ದೂರಿನಲ್ಲಿ ಮಾಡಿದ ಆಪಾದನೆಯ ಬಗ್ಗೆ ತನಿಖೆ ಮಾಡಿ ವರದಿ ಸಲ್ಲಿಸುವಂತೆ ತಾಂತ್ರಿಕ ಶಾಖೆಯ ಮುಖ್ಯ ಇಂಜಿನಿಯರ್ ಅವರಿಗೆ ಮಾನ್ಯ ಉಪಲೋಕಾಯುಕ್ತರು ಆದೇಶ ಮಾಡಿರುತ್ತಾರೆ. ಮುಖ್ಯ ಇಂಜಿನಿಯರ್ ಅವರು ದಿ.12.8.2010ರಂದು ಕಡತವನ್ನು ಸಹಾಯಕ ಇಂಜಿನಿಯರ್–2ರವರಿಗೆ ನೀಡಿ ವರದಿ ಸಲ್ಲಿಸಲು ಸೂಚಿಸಿದ್ದರು.

5. ತನಿಖಾಧಿಕಾರಿಯವರು ಎದುರುದಾರರಿಗೆ ದೂರಿನ ಪ್ರತಿಯನ್ನು ಕಳುಹಿಸಿ ಎದುರುದಾರರಿಂದ ದಿ.31.8.2010ರಂದು ಸದರಿ ಕಟ್ಟಡದ ಕಾಮಗಾರಿಯ ವರದಿಯನ್ನು ಪಡೆದುಕೊಂಡಿರುತ್ತಾರೆ. ಸದರಿ ವರದಿಗೆ ದೂರುದಾರರಿಂದ ದಿ.26.2.2011ರಂದು ವಿವರಣೆಯನ್ನು ಪಡೆದುಕೊಂಡಿರುತ್ತಾರೆ. ಮತ್ತೆ ದಿ.3.5.2011ರಂದು ದೂರುದಾರರ ವಿವರಣೆಯ ಮೇಲೆ ಎದುರುದಾರರಿಂದ ಆಕ್ಷೇಪಣೆಯನ್ನು ಪಡೆದಿರುತ್ತಾರೆ.

6. ತನಿಖಾಧಿಕಾರಿಗಳು ದಿ.15.4.2017ರಂದು ಸ್ಥಳ ತನಿಖೆಗೆ ಬೊಮ್ಮಲದೇವಿಪುರ ಸರ್ಕಾರಿ ಪ್ರೌಢಶಾಲೆಗೆ ಭೇಟಿ ನೀಡಿದಾಗ, ದೂರುದಾರರು ಮತ್ತು ಎದುರುದಾರರು ಸ್ಥಳದಲ್ಲಿ ಹಾಜರಿದ್ದರು. ಆ ದಿನ ತನಿಖಾಧಿಕಾರಿಗಳು ಕಟ್ಟಡ ನಿರ್ಮಾಣದ ಕಾಮಗಾರಿಯ ಅಂದಾಜುಪಟ್ಟಿಯನ್ನು ಎದುರುದಾರರಿಂದ ಪಡೆದುಕೊಂಡು ಪರಿಶೀಲಿಸಿ ಪ್ರೌಢಶಾಲೆ ಕಟ್ಟಡದ ನಿರ್ಮಾಣವನ್ನು ನಿರ್ಮಿತಿ ಕೇಂದ್ರ ತುಮಕೂರು ಅವರಿಗೆ ದಿ.23.8.2007ರಂದು ನೀಡಿದ್ದಿದೆಯೆಂದು ಹೇಳಿರುತ್ತಾರೆ. ತನಿಖೆಯ ಸಮಯದಲ್ಲಿ ರೂ.20 ಲಕ್ಷ ಹಣ ನಿರ್ಮಿತಿ ಕೇಂದ್ರಕ್ಕೆ 2 ಕಂತುಗಳಲ್ಲಿ ನೀಡಿದ್ದು, ಆದರೆ ಸದರಿ ಅನುದಾನದ ಮೊತ್ತದಲ್ಲಿ ರೂ.17.50 ಲಕ್ಷ ಹಣ ತಳಪಾಯದ ಕಾಮಗಾರಿಗಾಗಿ ವೆಚ್ಚವಾಗಿದ್ದು, ಬಾಕಿ ಉಳಿದ ರೂ. 2.50 ಲಕ್ಷ ಶಾಲಾ ಕಟ್ಟಡದ ಮೇಲ್ಕಟ್ಟಡದ ನಿರ್ಮಾಣಕ್ಕೆ ಸಾಲುತ್ತಿರಲಿಲ್ಲ. ಕಾರಣ ನಿರ್ಮಿತಿ ಕೇಂದ್ರದವರು ಸರ್ಕಾರಿ ಪ್ರೌಢಶಾಲಾ ಕಟ್ಟಡದ ಮತ್ತೊಂದು ಅಂದಾಜು ಪಟ್ಟಿಯನ್ನು ಅಂದಿನ ಸರ್ಕಾರಿ ದರಪಟ್ಟಿಗೆ ಅನುಗುಣವಾಗಿ ರೂ.45 ಲಕ್ಷಗಳಿಗೆ ತಯಾರಿಸಿದ್ದು, ಹೆಚ್ಚಿನ 25 ಲಕ್ಷ ರೂ.ಗಳ ಅನುದಾನ ಅವಶ್ಯಕತೆ ಇರುವುದರಿಂದ ಕಾಮಗಾರಿಯನ್ನು ಸ್ಥಗಿತಗೊಳಿಸಲಾಗಿತ್ತೆಂದು ಎದುರುದಾರರು ತನಿಖೆಯ ಸಮಯದಲ್ಲಿ ತಿಳಿಸಿದರೆಂದು ತನಿಖಾಧಿಕಾರಿಗಳು ತಮ್ಮ ವರದಿಯಲ್ಲಿ ತಿಳಿಸಿರುತ್ತಾರೆ. ನಂತರದ ವರ್ಷಗಳಲ್ಲಿ ಮೇಲ್ಕಟ್ಟಡದ ನಿರ್ಮಾಣಕ್ಕೆ ಭರಿಸಬೇಕಾದ ಹೆಚ್ಚುವರಿ 25 ಲಕ್ಷ ಮೊತ್ತವನ್ನು ನಿರ್ಮಿತಿ ಕೇಂದ್ರದ ವತಿಯಿಂದಲೇ ಭರಿಸಿ ಕಟ್ಟಡ ನಿರ್ಮಾಣ ಪೂರ್ಣಗೊಳಿಸಿ 2011ರಲ್ಲಿ ಇಲಾಖೆಗೆ ಹಸ್ತಾಂತರಿಸಲಾಗಿದೆಯೆಂದು ನಿರ್ಮಿತಿ ಕೇಂದ್ರದ ಅಧಿಕಾರಿಗಳು ತಿಳಿಸಿದರೆಂದು ತನಿಖಾಧಿಕಾರಿಗಳು ವರದಿಯಲ್ಲಿ ಹೇಳಿರುತ್ತಾರೆ.

7. ತನಿಖಾಧಿಕಾರಿಗಳು ತಮ್ಮ ವರದಿಯ 3.05 ಕಂಡಿಕೆಯಲ್ಲಿ ಕಟ್ಟಡದ ಹೊರಗಿನ ಭಾಗವನ್ನು ಗಮನಿಸಿದಾಗ ಕಟ್ಟಡದಲ್ಲಿ ಸಣ್ಣ ಬಿರುಕುಗಳು ಬಿಟ್ಟಿರುವುದು ಹಾಗೂ ಕಟ್ಟಡದ ಹಜಾರದ ಅಂಚಿನಲ್ಲಿ ಅಲ್ಲಲ್ಲಿ ಸಿಮೆಂಟ್ ಕಿತ್ತು ಹೋಗಿರುವುದು ಕಂಡುಬಂದಿತೆಂದು ಹೇಳಿರುತ್ತಾರೆ. ಮುಂದುವರೆದು, ಅಂದಾಜುಪಟಿಯಲ್ಲಿ ತಿಳಿಸಿದಂತೆ ಕಟ್ಟಡ ನಿರ್ಮಾಣ ಮಾಡಲಾಗಿದೆಯೆಂದು ಹೇಳಿರುತ್ತಾರೆ. ತನಿಖಾಧಿಕಾರಿಗಳು ತಮ್ಮ ಅಭಿಪ್ರಾಯದಲ್ಲಿ ಕಟ್ಟಡ ನಿರ್ಮಿಸುವ ಉದ್ದೇಶಿತ ಸ್ಥಳದಲ್ಲಿ ತಗ್ಗುಪ್ರದೇಶವಾಗಿದ್ದರಿಂದ ಮಳೆಗಾಲದಲ್ಲಿ ಕಟ್ಟಡ ನೀರಿನಲ್ಲಿ ಮುಳುಗಡೆಯಾಗದಂತೆ ನಿರ್ಮಿಸುವ ಅವಶ್ಯಕತೆಗನುಗುಣವಾಗಿ ತಳಪಾಯವನ್ನು ಎತ್ತರವಾಗಿ ಕಟ್ಟಲಾಗಿದೆ. ಆದ್ದರಿಂದ ಸರ್ಕಾರದಿಂದ

ಅನುಮೋದನೆಗೊಂಡ 20 ಲಕ್ಷ ರೂ.ಮೊತ್ತದಲ್ಲಿ ಕಟ್ಟಡ ನಿರ್ಮಿಸಲಾಗಿರುವುದಿಲ್ಲ ಮತ್ತು ಹೆಚ್ಚಿನ ವೆಚ್ಚ ಭರಿಸಬೇಕಾಯಿತೆಂದು ಸದರಿ ಹೆಚ್ಚುವರಿ ವೆಚ್ಚವನ್ನು ಕೇಂದ್ರದ ನಿರ್ಮಿತಿ ಕೇಂದ್ರದಲ್ಲಿ ಲಭ್ಯವಿರುವ ಅನುದಾನವನ್ನು ಬಳಸಿಕೊಂಡು ಕಟ್ಟಡ ನಿರ್ಮಿಸಿದ್ದರಿಂದ ಸರ್ಕಾರಕ್ಕೆ ಯಾವುದೇ ಹೊರೆಯಾಗಿರುವುದಿಲ್ಲವೆಂದು ತಿಳಿಸಿ, ದೂರುದಾರರು ನೀಡಿರುವ ದೂರು ಸಾಬೀತಾಗಿರುವುದಿಲ್ಲವೆಂದು ವರದಿಯಲ್ಲಿ ತಿಳಿಸಿರುತ್ತಾರೆ. ತಮ್ಮ ವರದಿಯ ಜೊತೆಗೆ ದಿ.15.4.2017ರಲ್ಲಿ ಮತ್ತು 9.9.2017ರಂದು ತಯಾರಿಸಿದ ಸ್ಥಳ ಮಹಜರನ್ನು, ಶಾಲೆಗೆ ನೀಡಿದ ಜಮೀನಿನ ಪಹಣಿಪತ್ರಿಕೆ, ಮಹಜರ್ ಸಮಯದಲ್ಲಿ ತೆಗೆದ ಪ್ರೌಢಶಾಲೆಯ ಫೋಟೋಗಳನ್ನು, ಹಾಗೂ 2ನೇ ಬಾರಿ ತಯಾರಿಸಿದ ಅಂದಾಜುಪಟ್ಟಿಯ ನಕಲನ್ನು ಮತ್ತು ಅಳತೆ ಪುಸ್ತಕದ ನಕಲನ್ನು ಹಾಜರುಪಡಿಸಿರುತ್ತಾರೆ.

8. ದೂರು, ತನಿಖಾ ವರದಿ ಮತ್ತು ತನಿಖಾ ವರದಿಯ ಜೊತೆಗೆ ಹಾಜರುಪಡಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ, ಕೊರಟಗೆರೆ ತಾಲ್ಲೂಕು ಬೊಮ್ಮಲದೇವಿಪುರ ಸರ್ಕಾರಿ ಶಾಲೆಯ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ತುಮಕೂರು ನಿರ್ಮಿತಿ ಕೇಂದ್ರಕ್ಕೆ ವಹಿಸಲಾಗಿತ್ತು. ಸದರಿ ಕಟ್ಟಡವನ್ನು 20 ಲಕ್ಷ ರೂ.ಹಣಕ್ಕೆ ಕಟ್ಟಲು ಅಂದಾಜುಪಟ್ಟಿಯನ್ನು ತಯಾರಿಸಿ, ನೀಲಿನಕ್ಷೆಯೊಂದಿಗೆ ನಿರ್ಮಿತಿ ಕೇಂದ್ರದವರಿಗೆ ದಿ.23.8.2007ರಂದು ಕಾಮಗಾರಿ ವಹಿಸಲಾಗಿತ್ತು. ಆದರೆ ಕಾಮಗಾರಿಯನ್ನು ನಿರ್ಮಿತ ಕೇಂದ್ರಕ್ಕೆ ವಹಿಸಿದ ಬಗ್ಗೆ ದಾಖಲೆ ಇರುವುದಿಲ್ಲ. ನಿರ್ಮಿತಿ ಕೇಂದ್ರದವರು ಸದರಿ ಅನುದಾನದಲ್ಲಿ 17.50 ಲಕ್ಷ ರೂ. ಹಣ ಬಳಸಿಕೊಂಡು ತಳಪಾಯದವರೆಗೆ ಮಾತ್ರ ಕಟ್ಟಡ ನಿರ್ಮಿಸಿ ಮುಂದೆ ಕಟ್ಟಡದ ಕಾಮಗಾರಿಯನ್ನು ಸ್ಥಗಿತಗೊಳಿಸಿರುತ್ತಾರೆ. ಜಿಲ್ಲಾ ಪಂಚಾಯತಿಯವರು ನಿರ್ಮಿತಿ ಕೇಂದ್ರಕ್ಕೆ ನೀಡಿದ ಅಂದಾಜುಪಟ್ಟಿಯಲ್ಲಿ ಕಂಡಿಕ 1 ರಿಂದ 8ರಲ್ಲಿ ತಳಪಾಯಕ್ಕಾಗಿ ಒಟ್ಟು 3,41,47/- ಹಣವನ್ನು ವ್ಯಯಿಸಲುನಮೂದು ಮಾಡಿರುತ್ತಾರೆ. ಎದುರುದಾರರು ಉದ್ದೇಶಿತ ಸ್ಥಳದಲ್ಲಿ ದೊಡ್ಡಹಳ್ಳವಿದ್ದು, ಸುಮಾರು 10 ರಿಂದ 13 ಅಡಿ ಪಾಯ ಭರಿಸಬೇಕಾಗಿತ್ತು. ಅದಕ್ಕೆ ರೂ. 17.50 ಲಕ್ಷ ಹಣ ವೆಚ್ಚವಾಗಿತ್ತು ಮತ್ತು ಉಳಿದ ಕಟ್ಟಡಕ್ಕೆ ಹೆಚ್ಚಿನ ಹಣ ಬೇಕಾಗಿದ್ದರಿಂದ ಮತ್ತೆ ಮೊದಲಿನ 20 ಲಕ್ಷ ರೂ. ಹಣ ಸೇರಿಸಿ ಒಟ್ಟು 45 ಲಕ್ಷ ರೂ. ಹಣಕ್ಕೆ ಅಂದಾಜು ಪಟ್ಟಿಯನ್ನು ತಯಾರಿಸಲಾಯಿತೆಂದು ಹೇಳಿರುತ್ತಾರೆ. ಸದರಿ ಅಂದಾಜುಪಟ್ಟಿಯನ್ನು

ಹಾಜರುಪಡಿಸಿದ್ದು, ಅದನ್ನು ನಿಶಾನೆ–ಎ ಎಂದು ಗುರುತಿಸಿದೆ. ಸದರಿ ಅಂದಾಜು ಪಟ್ಟಿಯನ್ನು ನಿರ್ಮಿತಿ ಕೇಂದ್ರದ ಪ್ರೊಜೆಕ್ಟ್ ಇಂಜಿನಿಯರ್ ಮತ್ತು ಸೈಟ್ ಇಂಜಿನಿಯರ್ ಅವರು ತಯಾರಿಸಿದ್ದು ಕಂಡುಬರುತ್ತದೆ ಮತ್ತು ಎದುರುದಾರರು ಅಂದಾಜುಪಟ್ಟಿಗೆ ಸಹಿ ಮಾಡಿರುತ್ತಾರೆ.

9. 2ನೇ ಬಾರಿ ತಯಾರಿಸಿದ ಅಂದಾಜುಪಟ್ಟಿಯನ್ನು ಯಾರ ಅನುಮತಿ ಪಡೆದು ತಯಾರಿಸಿರುತ್ತಾರೆಂದು ತಿಳಿಸಿರುವುದಿಲ್ಲ. 2ನೇ ಅಂದಾಜುಪಟ್ಟಿಯನ್ನು ತಯಾರಿಸಲು ನಿರ್ಮಿತಿ ಕೇಂದ್ರದ ಅಧ್ಯಕ್ಷರಾದ ಜಿಲ್ಲಾಧಿಕಾರಿಯವರ ಅನುಮತಿ ಪಡೆದಿರುವುದಿಲ್ಲ. ಸದರಿ ಅಂದಾಜುಪಟ್ಟಿಗೆ ಜಿಲ್ಲಾ ಪಂಚಾಯತಿಯ ಇಂಜಿನಿಯರ್ ಅವರ ಅನುಮೋದನೆ ಪಡೆದಿರುವುದಿಲ್ಲ. 2ನೇ ಅಂದಾಜುಪಟ್ಟಿಯನ್ನು ತಯಾರಿಸುವ ಮುಂಚೆ ಪಾಯ ಹಾಕುವ ಕಾಮಗಾರಿಯ ಕುರಿತು ರೂ. 17.50 ಲಕ್ಷ ಹಣ ವೆಚ್ಚ ಮಾಡಿದ ಬಗ್ಗೆ ಅಳತೆ ಪುಸ್ತಕದಲ್ಲಿ ತಿಳಿಸಿರುವುದಿಲ್ಲ. ಜಿಲ್ಲಾ ಪಂಚಾಯತಿಯಿಂದ ನೀಡಿದ ನೀಲಿ ನಕ್ಷೆಯಲ್ಲಿ ಅಥವಾ ಅಂದಾಜು ಪಟ್ಟಿಯಲ್ಲಿ ಶಾಲಾ ಕಟ್ಟಡದ ಉದ್ದೇಶಿತ ಸ್ಥಳದಲ್ಲಿ ತಗ್ಗು ಮತ್ತು ಹಳ್ಳದಿಂದ ಕೂಡಿತ್ತೆಂದು ತಿಳಿಸಿಲ್ಲ. ಹಾಗೂ ಅಂದಾಜು ಪಟ್ಟಿಯಲ್ಲಿ ಫೌಂಡೇಷನ್‌ಗಾಗಿ ರೂ. 3,41,497/– ಖರ್ಚಾಗುತ್ತದೆಂದು ತಿಳಿಸಿರುತ್ತದೆ. ತನಿಖಾಧಿಕಾರಿಯ ವರದಿಯ ಜೊತೆಗೆ ಹಾಜರುಪಡಿಸಿದ ಅಳತೆ ಪುಸ್ತಕದ ನಕಲನ್ನು ನಿಶಾನೆ–ಬಿ ಎಂದು ಗುರುತಿಸಲಾಗಿದೆ. ಅಳತೆ ಪುಸ್ತಕವನ್ನು ಪರಿಶೀಲಿಸಿದಾಗ ಅಳತೆ ಪುಸ್ತಕವನ್ನು ಯಾವ ಯಾವ ದಿನಾಂಕದಂದು ಬರೆದಿರುತ್ತಾರೆಂದು ದಿನಾಂಕವನ್ನು ನಮೂದಿಸಿರುವುದಿಲ್ಲ. ಅಳತೆ ಪುಸ್ತಕದ ಕೊನೆಯ ಪುಟದಲ್ಲಿ ನಿರ್ಮಿತಿ ಕೇಂದ್ರದ ಸೈಟ್ ಇಂಜಿನಿಯರ್ ಹಾಗೂ ಎದುರುದಾರರು ಸಹಿ ಮಾಡಿದ್ದು ಇರುತ್ತದೆ. ಆದರೆ ಯಾವ ದಿನಾಂಕದಂದು ಸಹಿ ಮಾಡಿರುತ್ತಾರೆಂದು ತಿಳಿಸಿರುವುದಿಲ್ಲ. ಆದ್ದರಿಂದ ಪ್ರೌಢಶಾಲಾ ಕಟ್ಟಡದ ಕಾಮಗಾರಿ ನಡೆಯುವ ಸಮಯದಲ್ಲಿ ಅಳತೆ ಪುಸ್ತಕವನ್ನು ಬರೆದಿರುವುದಿಲ್ಲವೆಂದು ಸ್ಪಷ್ಟವಾಗುತ್ತದೆ.

10. 2ನೇ ಬಾರಿ ತಯಾರಿಸಿದ ಅಂದಾಜುಪಟ್ಟಿಯ ಕಂಡಿಕೆ 15ರಲ್ಲಿ ಕಟ್ಟಡದ ಮುಂದೆ ಕಬ್ಬಿಣದ ಗೇಟ್ ಕೂಡಿಸುವ ಬಗ್ಗೆ ತಿಳಿಸಿರುತ್ತಾರೆ. ಆದರೆ ಅಳತೆ ಮಸ್ತಕದಲ್ಲಿ, ತನಿಖಾ ವರದಿಯಲ್ಲಿ ಗೇಟ್ ಹಾಕಿರುವ ಬಗ್ಗೆ ತಿಳಿಸಿರುವುದಿಲ್ಲ. ತನಿಖಾಧಿಕಾರಿಯವರು ಹಾಜರುಪಡಿಸಿದ ಫೋಟೋದಲ್ಲಿ ಗೇಟ್ ಕೂರಿಸಿರುವ ಬಗ್ಗೆ

ಕಂಡು ಬರುವುದಿಲ್ಲ. ಅಂದಾಜುಪಟ್ಟಿಯ ಕಂಡಿಕೆ 16ರಲ್ಲಿ ಶಾಲಾ ಕೊಠಡಿಗಳ ಬಾಗಿಲು ಮತ್ತು ಕಿಟಕಿಗಳಿಗೆ ಟೀಕ್‌ವುಡ್ ಫ್ರೇಮ್ ಅಳವಡಿಸಬೇಕೆಂದು ತಿಳಿಸಿರುತ್ತದೆ. ಆದರೆ ಅಳತೆ ಪುಸ್ತಕದಲ್ಲಿ ಯಾವ ದಿನಾಂಕ ಸದರಿ ಕಿಟಕಿಗೆ ಟೀಕ್ ವುಡ್ ಫ್ರೇಂ ಅಳವಡಿಸಿದ ಬಗ್ಗೆ ತಿಳಿಸಿರುವುದಿಲ್ಲ. ಎದುರುದಾರರು ಕಟ್ಟಡ ನಿರ್ಮಿಸಲು ಖರೀದಿಸಿದ ಕಬ್ಬಿಣ, ಪೈಂಟ್, ಸಿಮೆಂಟ್, ಹಾಗೂ ವುಡ್, ಕಲ್ಲು, ಇಟ್ಟಿಗೆ ಮತ್ತು ಇತರೆ ಸಾಮಗ್ರಿಗಳನ್ನು ರಸೀದಿಗಳನ್ನಾಗಲೀ ಹಾಗೂ ಖರೀದಿಸಲು ನೀಡಿದ ಬಿಲ್ಲಿನ ವೋಚರ್‌ಗಳನ್ನು ಹಾಜರುಪಡಿಸಿರುವುದಿಲ್ಲ. ಹೆಚ್ಚಿನ ಹಣ ರೂ. 25 ಲಕ್ಷ ಯಾವಾಗ ಯಾರು ನೀಡಿದರು ಮತ್ತು ಎಲ್ಲಿಂದ ನೀಡಿದರೆಂದು ತೋರಿಸಲು ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಸದರಿ ಶಾಲಾ ಕಟ್ಟಡದ ಕಾಮಗಾರಿ ಸಮಯದಲ್ಲಾಗಲೀ ಅಥವಾ ಕಟ್ಟಡ ಪೂರ್ಣ ಮುಗಿದನಂತರವಾಗಲೀ 3ನೇ ವ್ಯಕ್ತಿಯಿಂದ ಪರಿಶೀಲಿಸಿದ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಕಟ್ಟಡದ ಕಾಮಗಾರಿ ಮುಗಿದ ನಂತರ ಕಟ್ಟಡವನ್ನು ಪ್ರೌಢಶಾಲೆಗೆ ಯಾವಾಗ ಹಸ್ತಾಂತರಿಸಿದರೆಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಎದುರುದಾರರು ಸರ್ಕಾರದಿಂದ ಬಂದ ಅನುದಾನದ ಹಣವನ್ನು ಯಾವ್ಯಾವ ಕೆಲಸಕ್ಕೆ ಎಷ್ಟು ಎಷ್ಟು ಹಣ ಬಳಕೆ ಮಾಡಿಕೊಂಡ ಬಗ್ಗೆ ದಾಖಲೆಗಳನ್ನು ಇಟ್ಟಿರುವುದಿಲ್ಲ. ಆದ್ದರಿಂದ ಎದುರುದಾರರು ನಿರ್ಮಿತಿ ಕೇಂದ್ರದ ಯೋಜನಾ ವ್ಯವಸ್ಥಾಪಕರಾಗಿ ಕಟ್ಟಡ ನಿರ್ಮಿಸಲು ಸರ್ಕಾರದಿಂದ ನೀಡಿದ ಅನುದಾನವನ್ನು ದುರುಪಯೋಗ ಮಾಡಿಕೊಂಡಿದ್ದು ಮೇಲ್ನೋಟಕ್ಕೆ ಕಂಡುಬರುತ್ತದೆ.

11. ಆದ್ದರಿಂದ, ಎದುರುದಾರರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ನಿಯಮ 3(1) (i) ಮತ್ತು (ii)ರನ್ವಯ ದುರ್ನಡತೆಯೆಸಗಿದ್ದು, ಶಿಸ್ತು ಕ್ರಮಕ್ಕೆ ಭಾದ್ಯರಾಗಿರುವುದು ಕಂಡು ಬಂದಿರುವುದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(3) ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ಎದುರುದಾರರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಹಾಗೂ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಭಂಧ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 14–ಎ ರಡಿಯಲ್ಲಿ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆಯನ್ನು **ಉಪಲೋಕಾಯುಕ್ತರಿಗೆ** ವಹಿಸಬೇಕೆಂದೂ ಕೋರಲಾಗಿದೆ.

12. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

N. Anand 10/9

(ನ್ಯಾಯಮೂರ್ತಿ ಎನ್. ಆನಂದ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.

10/9/18